# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

# KARNATAKA LEGISLATIVE ASSEMBLY, RESEARCH AND REFERENCE BRANCH

## ಪತ್ರಿಕಾ ತುಣುಕುಗಳು

## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 24/9/20

# ರಾತ್ರಿ ಪಾಳಿ ಮಹಿಳಾ ಉದ್ಯೋಗಿ ರಕ್ಷಣೆಗೆ ಮುಸ್ಲೂದೆ



ವಿಧಾನ ಪರಿಷತ್ತು: ಐಟಿ-ಬಿಟಿ ಕಂಪನಿಗಳು ಸಹಿತವಾಗಿ ಮಾಲ್, ಅಂಗಡಿ ಹಾಗೂ ವಾಣಿಜ್ಯ ಸಂಸ್ಥೆಗಳಲ್ಲಿ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಮಹಿಳಾ ಉದ್ಯೋಗಿಗಳಿಗೆ ರಕ್ಷಣೆ ನೀಡುವ ಕಾರ್ಯ ಸರ್ಕಾರ ಮಾಡಬೇಕು ಎಂದು ಪಕ್ಷಾತೀತವಾಗಿ ಮೇಲ್ಮನೆ ಸದಸ್ಯರು ಆಗ್ರಹಿಸಿದರು.

ಕಾರ್ಮಿಕ ಸಚಿವ ಶಿವರಾಮ್ ಹೆಬ್ಬಾರ್ ಅವರು ಬುಧವಾರ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳಿಗೆ(ತಿದ್ದುಪಡಿ) ವಿಧೇಯಕ-2020 ಅನ್ನು ಮಂಡಿಸಿ, ಐಟಿ-ಬಿಟಿ ಹೊರತುಪಡಿಸಿ, ಉಳಿದ ಅಂಗಡಿ ಹಾಗೂ ವಾಣಿಜ್ಯ ಸಂಸ್ಥೆಗಳಲ್ಲಿ ರಾತ್ರಿ ಪಾಳಿಯಲ್ಲಿ ಸೇವೆ ಸಲ್ಲಿಸುವ ಮಹಿಳಾ ಉದ್ಯೋಗಿಗೆ ಭದ್ರತೆ ಹಾಗೂ ಸುರಕ್ಷತೆ ಒದಗಿಸಲು ಈ ಕಾಯ್ದೆ ತರಲಾಗುತ್ತಿದೆ. ಮಹಿಳಾ ಉದ್ಯೋಗಿಗೆ ರಾತ್ರಿ ಪಾಳಿಯ ಒತ್ತಡ ಇಲ್ಲ, ಸ್ವಯಂ ಪ್ರೇರಿತವಾಗಿ ರಾತ್ರಿ ಪಾಳಿ ಮಾಡುವ ಮಹಿಳಾ ಉದ್ಯೋಗಿಗೆ ಸುರಕ್ಷತೆ ಒದಗಿಸುವುದು ಅನಿವಾರ್ಯವಾಗಿದೆ ಎಂದರು.

ಸದಸ್ಯರಾದ ತೇಜಸ್ವಿನಿ, ತಿಪ್ಪೇಸ್ವಾಮಿ, ಆಯನೂರು ಮಂಜುನಾಥ್, ಯು.ಬಿ. ವೆಂಕಟೇಶ್ ಅಪ್ಪಾಜಿಗೌಡ, ಮರಿತಿಬ್ಬೇಗೌಡ, ಪಿ.ಆರ್. ರಮೇಶ್, ಭಾರತಿ ಶೆಟ್ಟಿ ಮೊದಲಾದವರು ಮಾತನಾಡಿ, ಐಟಿ ಬಿಟಿಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ರಕ್ಷಣೆ ನೀಡಲಾಗುತ್ತಿದೆ. ಆದರೆ, ವಿಧೇಯಕದಲ್ಲಿ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಮಹಿಳಾ ಉದ್ಯೋಗಿಯನ್ನು ವಾಹನದಲ್ಲಿ ಆರಂಭದಲ್ಲಿ ಒಬ್ಬಂಟಿಯಾಗಿ ಹತ್ತಿಸಿಕೊಳ್ಳುವಂತಿಲ್ಲ ಹಾಗೂ ಕೆಲಸ ಮುಗಿದ ಕೂಡಲೇ ಅವರನ್ನು ಕೊನೆಯಲ್ಲಿ ಒಬ್ಬರನ್ನೇ ಮನೆ ಬಳಿ ಬಿಡುವಂತಿಲ್ಲ ಎಂದು ಹೇಳಲಾಗಿದೆ. ಹೀಗಾದರೆ ಕಷ್ಟ ಮಹಿಳಾ ಭದ್ರತಾ ಸಿಬ್ಬಂದಿಯನ್ನು ನಿಯೋಜನೆ ಮಾಡಿ. ಮಹಿಳಾ ಚಾಲಕರನ್ನೇ ನಿಯೋಜನೆ ಮಾಡಬೇಕು ಎಂದರು.

ಬಾರ್, ರಸ್ಟೋರೆಂಟ್ ಹಾಗೂ ಮದ್ಯ ಸರಬರಾಜಿನಂತಹ ಕೆಲಸಗಳಿಗೆ ಮಹಿಳಾ ಉದ್ಯೋಗಿ ಬಳಕೆ ಮಾಡಿಕೊಳ್ಳದಂತೆ ಮುನ್ನೆಚ್ಚರಿಕೆ ವಹಿಸಬೇಕು. ರಾತ್ರಿ ಪಾಳಿಯಲ್ಲಿ ಮಹಿಳಾ ಉದ್ಯೋಗಿಗೆ ಸಮಸ್ಯೆ ಎದುರಾಗದಂತೆ ವಿಧೇಯಕದಲ್ಲಿ ಕೆಲವು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕು. ಅಲ್ಲದೆ, ಇದು ಯಾವೆಲ್ಲ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಿಗೆ ಅನ್ವಯಿಸುತ್ತದೆ ಎಂಬುದನ್ನು ಸ್ಪಷ್ಟಪಡಿಸಬೇಕು. ಮಹಿಳಾ ಉದ್ಯೋಗಿಗೆ ಎಲ್ಲ ರೀತಿಯಲ್ಲೂ ರಾತ್ರಿ ಪಾಳಿಯಲ್ಲಿ ಸುರಕ್ಷಿತ ವಾತಾವರಣ ಇರಬೇಕು ಎಂದು ಸಲಹೆ ನೀಡಿದರು.